ಶ್ರೀ ಸುರೇಶ್ ಎಸ್ ಮಾರಿಹಾಳ್ :- ಮಾನ್ಯ ಅಧ್ಯಕ್ಷರೆ, ನಮ್ಮ ಘನ ಸರ್ಕಾರ ಗುಲ್ಬರ್ಗದಲ್ಲಿ cabinet meeting ಅನ್ನು ಮಾಡಿ, ಅಲ್ಲಿ ಯಾದಗಿರಿ ಜಿಲ್ಲೆಯನ್ನು ಘೋಷಣೆ ಮಾಡಿದೆ. ಇಲ್ಲಿ ವಿಶೇಷವಾಗಿ ಅಧಿವೇಶನವನ್ನು ಮಾಡುತ್ತಿರುವುದರಿಂದ ಇಲ್ಲಿ ತಾಲ್ಲೂಕು ಎಂದು ಘೋಷಣೆ ಮಾಡಬೇಕೆಂಬುದು ಒತ್ತಾಯವಾಗಿದೆ. ಕಿತ್ತೂರು ನಾಡಿನ ಜನತೆಯ ಪರವಾಗಿ ಸರ್ಕಾರದಲ್ಲಿ ಹಾಗೂ ಮಾನ್ಯ ಮುಖ್ಯಮಂತ್ರಿಯವರಲ್ಲಿ ತಾಲ್ಲೂಕೆಂದು ಘೋಷಣೆ ಮಾಡಬೇಕೆಂದು ನನ್ನ ಕಳಕಳಿಯ ಮನವಿ ಇದೆ.

ಅಧ್ಯಕ್ಷರು :- ಮಾನ್ಯ ಸಚಿವರೆ, ಅವರು ಆದ್ಯತೆಯ ಮೇಲೆ ಮಾಡಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಸುರೇಶ್ ಎಸ್. ಮಾರಿಹಾಳ್ :- ಮಾನ್ಯ ಅಧ್ಯಕ್ಷರೆ, ಇಲ್ಲಿ ವಿಶೇಷವಾಗಿ ಅಧಿವೇಶನ ನಡೆದಿದೆ. ತಾವು ಕೂಡ ಉತ್ತರ ಕರ್ನಾಟಕದಲ್ಲಿ ಜನಿಸಿದಂಥವರು. ತಮಗೂ ಕೂಡ ಈ ಒಂದು ವಿಷಯಕ್ಕೆ ಬೆಳಕನ್ನು ಚೆಲ್ಲಬೇಕೆಂಬುದು ನನ್ನ ಮನವಿಯಾಗಿದೆ. ಆಗ ಈ ಅಧಿವೇಶನಕ್ಕೂ ಮಹತ್ವ ಬರುತ್ತದೆ.

ಶ್ರೀ ಜಿ.ಕರುಣಾಕರ ರೆಡ್ಡಿ :- ಮಾನ್ಯ ಅಧ್ಯಕ್ಷರೆ, ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರ ಕಳಕಳಿ ಅರ್ಥವಾಗಿದೆ. ನೀವು ಹೇಳಿದಹಾಗೆ ಅವರು ಮೇ ತಿಂಗಳಲ್ಲಿ ಏನು ವರದಿಯನ್ನು ಕೊಡುತ್ತಾರೋ, ಆ ನಂತರ ಸರ್ಕಾರ ಎಲ್ಲಾ ರೀತಿಯು ಯೋಚನೆಯನ್ನು ಮಾಡಿ, ಒಂದು ಒಳ್ಳೆಯು ನಿರ್ಧಾರವನ್ನು ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು : ಮಾನ್ಯ ಚಿಕ್ಕನಗೌಡ ಸಿದ್ಧನಗೌಡ ಈಶ್ವರಗೌಡರವರೆ, ತಾವು ಕೇಳಿ.

(ಏ) ವಿಷಯ: <u>ಕೆರೆಗಳ ಹೂಳನ್ನು ತೆಗೆಸಿ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡುವ ಬಗ್ಗೆ</u> :

ಶ್ರೀ ಚಿಕ್ಕನಗೌಡ ಸಿದ್ಧನಗೌಡ ಈಶ್ವರಗೌಡ (ಕುಂದಗೋಳ) :- ಮಾನ್ಯ ಅಧ್ಯಕ್ಷರೆ, ಕುಂದಗೋಳ ಕ್ಷೇತ್ರದ ಸುಮಾರು 53ಕ್ಕೂ ಹೆಚ್ಚಿನ ಹಳ್ಳಿಗಳಿರುವ ಜನರು ಕರೆಗಳ ನೀರನ್ನು ಕುಡಿಯಲು ಉಪಯೋಗಿಸುತ್ತಿದ್ದು, ಈ ಕೆರೆಗಳ ತುಂಬ ಹೂಳು ತುಂಬಿ ನೀರು ಮಲಿನಗೊಂಡಿರುವುದರಿಂದ ಕುಡಿಯಲು ಯೋಗ್ಯವಲ್ಲದಂತಾಗಿರುತ್ತದೆ. ಅದುದರಿಂದ ಈ ಕೆರೆಗಳ ಹೂಳನ್ನು ತೆಗೆಸಿ ಶುದ್ಧ ಕುಡಿಯುವ ನೀರನ್ನು ಸರಬರಾಜು

ಮಾಡುವ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀಮತಿ ಶೋಭಾ ಕರಂದ್ಲಾಜೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :- ಮಾನ್ಯ ಅಧ್ಯಕ್ಷರೆ,

ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನಲ್ಲಿ 22 ಗ್ರಾಮ ಪಂಚಾಯತಿಗಳಿದ್ದು, 58 ಜನವಸತಿಗಳಿರುತ್ತವೆ. ಈ ಎಲ್ಲ ಜನವಸತಿಗಳಲ್ಲಿ ಕೊಳವೆ ಬಾವಿ ಜಲಮೂಲಗಳ ಮುಖಾಂತರ ನಲ್ಲಿ ನೀರು ಸರಬರಾಜು ಯೋಜನೆ, ಕಿರು ನೀರು ಸರಬರಾಜು ಯೋಜನೆ ಹಾಗೂ ಕೈಪಂಪು ಕೊಳವೆ ಬಾವಿಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.

ಕುಂದಗೋಳ ತಾಲ್ಲೂಕಿನ ಒಟ್ಟು 70 ನಲ್ಲಿ ನೀರು ಸರಬರಾಜು ಯೋಜನೆಗಳು, 71 ಕಿರು ನೀರು ಸರಬರಾಜು ಯೋಜನೆಗಳು ಹಾಗೂ 398 ಕೊಳವೆ ಬಾವಿಗಳು ಇರುತ್ತವೆ.

ಕುಂದಗೋಳ ತಾಲ್ಲೂಕಿನಲ್ಲಿ ಕೆರೆ ಜಲಮೂಲವನ್ನಾಗಿ ತೆಗೆದುಕೊಂಡು, ನೀರನ್ನು ಶುದ್ಧೀಕರಿಸಿ, ಸರಬರಾಜು ಮಾಡುವ ಯೋಜನೆಯನ್ನು ಯರೇಬೂದಿಹಾಳ ಗ್ರಾಮದಲ್ಲಿ ಮಾತ್ರ ಅನುಷ್ಠಾನಗೊಳಿಸಲಾಗಿದೆ. ಆದಾಗ್ಯೂ ಸಹ ಜನರು ಈ ಹಿಂದೆ ಕೊಳವೆ ಬಾವಿ ಜಲಮೂಲದಿಂದ ಸರಬರಾಜು ಮಾಡುತ್ತಿರುವ ನಲ್ಲಿ ನೀರಿ ಸರಬರಾಜು ಯೋಜನೆಯನ್ನು ಬಳಸುತ್ತಿದ್ದಾರೆ. ಇನ್ನು ಕೊಂಕಣಕುರಹಟ್ಟಿ, ಕೊಡ್ಲಿವಾಡ, ಮುಳ್ಳಳ್ಳಿ, ಹಾಗೂ ಯರಿ ನಾರಾಯಾಣಪೂರ ಗ್ರಾಮಗಳಲ್ಲಿನ ಕುಡಿಯುವ ನೀರಿನ ಕೆರೆಗಳನ್ನು ಶುದ್ಧಿಕರಿಸಿ, ಪ್ರಶರ್ ಫಿಲ್ಟರ್ ಅಳವಡಿಸುವ ಕೆಲಸಗಳು ಪ್ರಗತಿಯಲ್ಲಿವೆ. ಈ ನಾಲ್ಕು ಗ್ರಾಮಗಳಿಗೂ ಸಹ ಸುಮಾರು 8 ಕಿ.ಮೀ ದೂರದಲ್ಲಿರುವ ಕೊಳವೆ ಬಾವಿಯಿಂದ ಸಧ್ಯ ನೀರು ಸರಬರಾಜು ಮಾಡಲಾಗುತ್ತಿದೆ.

2008-09 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಲೆಕ್ಕಶೀರ್ಷಿಕೆ-4702 ರ ವಿಶೇಷ ಅಭಿವೃದ್ಧಿ ಯೋಜನೆಯಡಿ ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿಗಾಗಿ ಮಾರ್ಗಸೂಚಿಯೊಂದಿಗೆ ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿಗೆ ರೂ. 28.00 ಲಕ್ಷಗಳ ಅನುದಾನವನ್ನು ಸಂಖ್ಯೆ : ಗ್ರಾಅಪ 2/1 : ಕೆರೆ 2008 ದಿನಾಂಕ 29-12-2008 ರ ಸರ್ಕಾರದ ಆದೇಶದಲ್ಲಿ ಹಂಚಿಕೆ ಮಾಡಲಾಗಿದ್ದು, ಕೆರೆಗಳ ಆಯ್ಕೆ ಮಾಡಿ ಕಾಮಗಾರಿಯನ್ನು ಕೈಗೊಳ್ಳಬೇಕಾಗಿದೆ.

ಕುಂದಗೋಳ ತಾಲ್ಲೂಕಿನಲ್ಲಿ ಇರುವ ಕೆಲವೊಂದು ಕೆರೆಗಳನ್ನು NREGA ಯೋಜನೆಯಲ್ಲಿ ಹೂಳು ತೆಗೆಯಲು ಕ್ರಮ ಕೈಗೊಳ್ಳಲಾಗಿದ್ದು, ಈಗಾಗಲೇ ಕಳಸ, ತೀರ್ಥ ಗ್ರಾಮಗಳಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಇನ್ನೂ ಕೆಲವೊಂದು ಗ್ರಾಮಗಳಲ್ಲಿ ಅನುದಾನಕ್ಕನುಗುಣವಾಗಿ ವಿವಿಧ ಯೋಜನೆಗಳಲ್ಲಿ ಕೆರೆಗಳ ಹೂಳು ತೆಗೆಯುವ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಶ್ರೀಮತಿ ಶೋಭಾ ಕರಂದ್ಲಾಜೆ :- ಕುಂದಗೋಳ ತಾಲ್ಲೂಕು ಡಾ॥ ನಂಜುಂಡಪ್ಪ ವರದಿಯಲ್ಲಿ ಬರುವಂಥ ತಾಲ್ಲೂಕಾಗಿದ್ದು, ಡಾ॥ ನಂಜುಂಡಪ್ಪ ವರದಿಯಲ್ಲಿರುವ 114 ತಾಲ್ಲೂಕುಗಳಿಗೆ ಸುಮಾರು 50 ಕೋಟಿ ರೂಪಾಯಿಗಳನ್ನು ಈ ಬಾರಿ ಕೊಟ್ಟಿದ್ದೇವೆ. ಕುಂದಗೋಳ ತಾಲ್ಲೂಕಿಗೆ ಈಗಾಗಲೇ 28 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಆ ತಾಲ್ಲೂಕಿಗೆ ಇಷ್ಟರಲ್ಲೆ ನೀರು ಪೂರೈಕೆ ಮಾಡುವಂಥ ಕೆಲಸ ಖಂಡಿತ ಆಗುವುದಿಲ್ಲ. ಇಲ್ಲಿ ಬಹಳ ದೊಡ್ಡ ಪ್ರಮಾಣದ ಕೆರೆಗಳು ಅಲ್ಲಿವೆ, ಮತ್ತೆ ಅಲ್ಲಿ ಯಾವುದೇ ನದಿ ಮೂಲದ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದ ಕಾರಣ, ಕೆರೆಗಳನ್ನು ಪುನಜ್ಜೀವನಗೊಳಿಸುವಂಥ ಕೆಲಸ ಆ ತಾಲ್ಲೂಕಿನಲ್ಲಿ ಆಗಬೇಕಾಗಿದೆ. ಇದಕ್ಕೆ ಸರ್ಕಾರ ಹೆಚ್ಚಿನ ಒತ್ತನ್ನು ಕೊಡುತ್ತದೆ. ಹಾಗೆ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ (NREGA) ಯಲ್ಲಿ ಕೂಡ ನಾಲೆಗಳ ರಿಪೇರಿ ಮತ್ತು ಕೆರೆಗಳ ರಿಪೇರಿಯನ್ನು ಹೆಚ್ಚು ಆದ್ಯತೆಯ ಮೇಲೆ ತೆಗೆದುಕೊಳ್ಳಬೇಕೆಂದು ಸರ್ಕಾರ ನಿರ್ಧಾರ ಮಾಡಿದೆ, ಮತ್ತೆ ಎಲ್ಲಿ ನದಿ ಮೂಲದ ನೀರಿಲ್ಲ. ಅಲ್ಲಿ ಬರುವ ವರ್ಷದಿಂದ ಕೆರೆಗಳನ್ನು ಅಭಿವೃದ್ಧಿಪಡಿಸಿ, ಕೆರೆಗಳ ಮೂಲಕ ನೀರನ್ನು ಕೊಡುವುದಕ್ಕೆ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಡುತ್ತದೆನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಯಪಡಿಸುತ್ತೇನೆ.

ಶ್ರೀ ಚಿಕ್ಕನಗೌಡ ಸಿದ್ಧನಗೌಡ ಈಶ್ವರಗೌಡ :- ಮಾನ್ಯ ಅಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಸಂಪೂರ್ಣವಾದ ಮಾಹಿತಿಯನ್ನು ಕೊಟ್ಟಿದ್ದಾರೆ. ನಾನು ತಮ್ಮ ಮುಖಾಂತರ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಕುಂದಗೋಳ ಕ್ಷೇತ್ರವೆಂದರೆ ಸಂಪೂರ್ಣವಾದಂಥ ಏರಿ ಭೂಮಿ ಇರುವಂಥ ತಾಲ್ಲೂಕಾಗಿದೆ. ಕುಂದಗೋಳ ತಾಲ್ಲೂಕಿಗೆ ನೀರನ್ನು ಪೂರೈಕೆ ಮಾಡುವಂಥಾದ್ದು ತಲಗಟ್ಟಿ ತಾಲ್ಲೂಕಿನಲ್ಲಿದೆ. ಇವತ್ತು ಅಲ್ಲಿಂದ ನೀರು ಸರಬರಾಜು ಮಾಡುತ್ತಿದ್ದಾರೆ. ಅದರೆ ಇನ್ನೂ ಉಳಿದ 65 ಹಳ್ಳಿಗಳಿಗೆ ಯಾವುದೇ ಗ್ರಾಮದಲ್ಲಿ ಬೋರ್‌ವೆಲ್ ಕೊರೆದರೆ ನೀರು ಬರುತ್ತಿಲ್ಲ. 30ಕಿ.ಮೀ, 40 ಕಿ.ಮೀ,ಗೆ

ಬೋರ್‌ವೆಲ್‌ಗಳನ್ನು ಹಾಕಿ ನೀರನ್ನು ತರುವಂಥ ಸಂದರ್ಭವನ್ನು ಇವತ್ತು ಆ ತಾಲ್ಲೂಕಿನಲ್ಲಿ ಕಾಣುತ್ತಿದ್ದೇವೆ. ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಾವು ಸಣ್ಣ ನೀರಾವರಿ ಸಚಿವರನ್ನು ಕೇಳಿದರೆ, ಅವರು ಆ ಕೆರೆಗಳಲ್ಲಿ ನನಗೆ ಹೂಳು ತೆಗೆಯುವುದಕ್ಕೆ ಆಗುವುದಿಲ್ಲವೆಂಬ ಮಾತನ್ನು ಹೇಳುತ್ತಿದ್ದಾರೆ. ಬೃಹತ್ ನೀರಾವರಿ ಸಚಿವರನ್ನು ಕೇಳಿದರೆ, ಅವರು ನನಗೆ ಸಂಬಂಧವಿಲ್ಲವೆಂಬ ಮಾತನ್ನು ಹೇಳುತ್ತಾರೆ. ಇವತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರನ್ನು ನಾನು ನಾಲ್ಕೈದು ಬಾರಿ ವಿನಂತಿಯನ್ನು ಮಾಡಿಕೊಂಡಿದ್ದೇನೆ. ಅವರು ಇದಕ್ಕೆ 28 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆ 28 ಲಕ್ಷ ರೂಪಾಯಿಗಳನ್ನು 52 ಗ್ರಾಮಗಳಿಗೆ, 52 ಕೆರೆಗಳಿಗೆ ಕೊಟ್ಟಿದ್ದಾರೆ. ಇದು ಯಾವುದಕ್ಕೂ ಸಾಕಾಗುವುದಿಲ್ಲ, ಏಕೆಂದರೆ ಒಂದು ಕೆರೆಗೆ ಮೂರು ಲಕ್ಷ, ನಾಲ್ಕು ಲಕ್ಷ ರೂಪಾಯಿಗಳನ್ನು ಹಾಕಿದರೆ ಹೂಳು ತೆಗೆದಂಥಾದ್ದು ಒಂದು ಟ್ರಾಕ್ಟರೋ, ಎರಡು ಟ್ರಾಕ್ಟರೊ, ಬರುತ್ತದೆ. ಇದರಿಂದ ಒಂದು ದೊಡ್ಡ ಹೊಂಡದಲ್ಲಿ ಒಂದು ಕೊಡ ನೀರು ತುಂಬಿಕೊಂಡ ಹಾಗೆ ಆಗುತ್ತದೆ. ಅದಕ್ಕೆ ನಾನು ತಮ್ಮ ಮುಖಾಂತರ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇವತ್ತು ಮಲಪ್ರಭಾ ಬಲದಂಡೆ ಕಾಲುವೆ ಇದು ನಮ್ಮ ಕುಂದಗೋಳ ಗ್ರಾಮಕ್ಕೆ ಅತೀ ಪಕ್ಕದಲ್ಲೆ ಬರುತ್ತದೆ. ಇಲ್ಲಿಗೆ ಶಾಶ್ವತವಾದಂಥ ಕುಡಿಯುವ ನೀರಿನ ಯೋಜನೆಯನ್ನು ಮಾಡುವಂಥಾದ್ದು, ಇವತ್ತು ಇಲ್ಲಿ ಅನೇಕ ಶಾಸಕರು ಮಾತನಾಡುವಂಥ ಸಂದರ್ಭದಲ್ಲಿ ನಾನು ಕಣ್ಣಾರೆ ಕಂಡಿದ್ದೇನೆ. ಅನೇಕ ವಿಚಾರಗಳನ್ನು ನಾನು ಮನನ ಮಾಡಿಕೊಂಡಿದ್ದೇನೆ. ನಾನು ಏನು ವಿಚಾರ ಮಾಡಿಕೊಂಡಿದ್ದೇನೆಂದರೆ, ಸಾಕಷ್ಟು ರೈತರಿಗೆ ಭೂಮಿಗೆ ನೀರಾವರಿಯನ್ನು ಕೊಡುವಂಥಾದ್ದಕ್ಕೆ ಕರ್ನಾಟಕ ಸರ್ಕಾರ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆ. ನಾವು ಭೂಮಿಗೆ ನೀರನ್ನು ಕೊಡಬಾರದೆಂದು ಇಲ್ಲ, ರೈತರಿಗೆ ವ್ಯವಸಾಯವನ್ನು ಮಾಡುವುದಕ್ಕೆಂದು ಕೊಡುತ್ತೀರಿ. ಅದೇ ರೀತಿಯಲ್ಲಿ ಕುಡಿಯುವ ನೀರಿಗೆ ಕೊಡಬೇಕೆಂದು ನಾನು ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ.

ಶ್ರೀಮತಿ ಶೋಭಾ ಕರಂದ್ಲಾಜೆ :- ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಕಳೆದ ವರ್ಷದ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಯವರು ರಾಜ್ಯದಲ್ಲಿ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು ಮಾಡುತ್ತೇವೆಂಬ ಭರವಸೆಯನ್ನು ಕೊಟ್ಟಿದ್ದಾರೆ. ಆ ಕಾರಣಕ್ಕಾಗಿ ಇವತ್ತು ರಾಜ್ಯದಲ್ಲಿರುವಂಥ ಎಲ್ಲಾ ನದಿ ಮೂಲಗಳನ್ನು, ಜಲಾಶಯಗಳನ್ನು ಬಳಸಿಕೊಂಡು, ಬರುವ ವರ್ಷಗಳಲ್ಲಿ ಶಾಶ್ವತವಾದಂಥ ಶುದ್ಧವಾದ

ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕೆಂಬ ದೃಷ್ಟಿಯಿಂದ ಯೋಜನೆಯೊಂದು ತಯಾರಾಗುತ್ತಿದೆ.

ಈಗಾಗಲೇ ನಾವು ಬಿಜಾಪುರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಈ ರೀತಿಯ ಪೈಲಟ್ ಯೋಜನೆಯಲ್ಲಿ ಕೆಲಸ ತೆಗೆದುಕೊಳ್ಳಲು ಈಗಾಗಲೇ ಒಂದು ಆಜ್ಞೆಯನ್ನು ಮಾಡಿದ್ದೇವೆ. ಮುಂದೆ ಬರುವಂಥ ವರ್ಷಗಳಲ್ಲಿ ತಾವು ಏನು ಅಪೇಕ್ಷೆ ವ್ಯಕ್ತಪಡಿಸಿದ್ದೀರಿ, ನಾಲೆ ಹತ್ತಿರದಲ್ಲೇ ಹೋಗುತ್ತಿದೆ, ಆದರೆ ಕುಡಿಯಲು ನೀರು ಇಲ್ಲ ಎಂದು ಹೇಳಿದ್ದೀರಿ. ಇದು ಸತ್ಯ ಇದೆ. ಬಹಳಷ್ಟು ಕಡೆಗಳಲ್ಲಿ ಪಕ್ಕದಲ್ಲೇ ನದಿ, ನಾಲೆ ಹೋಗುತ್ತಿದ್ದರೂ ಕುಡಿಯುವ ನೀರಿಗೆ ಬರ ಎನ್ನುವಂಥ ಸ್ಥಿತಿ ನಿರ್ಮಾಣವಾಗಿದೆ. ಆ ಕಾರಣಕ್ಕಾಗಿ, ಮುಂದಿನ ವರ್ಷಗಳಲ್ಲಿ ಖಂಡಿತವಾಗಿ surface water ಅನ್ನು ಕೊಡುವ ರೀತಿಯಲ್ಲಿ ಸರ್ಕಾರ ಗಮನ ಹರಿಸುತ್ತದೆ ಎನ್ನುವ ಭರವಸೆಯನ್ನು ಕೊಡುತ್ತಿದ್ದೇನೆ.

ಶ್ರೀ ಚಿಕ್ಕನಗೌಡ ಸಿದ್ಧನಗೌಡ ಈಶ್ವರಗೌಡ :- ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮುಖಾಂತರ ಸಚಿವರಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆ ಎಂದರೆ ನಮ್ಮಲ್ಲಿ 52 ಕೆರೆಗಳಿವೆ. ಎಲ್ಲದಕ್ಕೂ ಒಂದೇ ವರ್ಷದಲ್ಲಿ ಹಣ ಕೊಡಿ ಎಂದು ನಾವು ಕೇಳುತ್ತಿಲ್ಲ. ಬೇಕಿದ್ದರೆ ವರ್ಷಕ್ಕೆ 10-10 ಕೆರೆಗಳಿಗೇ ಕೊಡಲಿ. ನಮ್ಮ ತಾಲ್ಲೂಕಿನಲ್ಲಿ ಏನು ಪರಿಸ್ಥಿತಿ ಇದೆ ಎನ್ನುವುದು ತಮಗೇ ಗೊತ್ತಿದೆ, ನಮ್ಮ ಕ್ಷೇತ್ರಕ್ಕೆ ತಾವೂ ಬಂದು ಹೋಗಿದ್ದೀರಿ, ಸಚಿವರೂ ನಮ್ಮ ಕ್ಷೇತ್ರಕ್ಕೆ ಬಂದು ಹೋಗಿದ್ದಾರೆ. ಒಂದೊಂದು ಕೆರೆ ಕಡಿಮೆಯೆಂದರೂ 25-30 ಪ್ರದೇಶದಲ್ಲಿ ಇರುವಂಥ ಕೆರೆಗಳಾಗಿವೆ. ಆದರೆ ಎಲ್ಲಿಯೂ ಕುಡಿಯುವ ನೀರಿನ ಅನುಕೂಲವಿಲ್ಲ. ನಾನು ವಿನಂತಿ ಮಾಡಿಕೊಳ್ಳುವುದಿಷ್ಟೇ, ಅಲ್ಲಿ ಪರಿಸ್ಥಿತಿ ಯಾವ ರೀತಿ ಇದೆ ಎಂದರೆ, ಒಂದು ವರ್ಷ ಮಳೆಯಾಗಿ, ಎರಡು ವರ್ಷ ಮಳೆಯಾಗಲಿಲ್ಲವೆಂದರೆ ಆ ಕೆರೆಗಳು ಪೂರ್ತಿಯಾಗಿ ಬತ್ತಿಹೋಗುತ್ತವೆ. ಸಚಿವರು ಯಾರಾದರೊಬ್ಬರನ್ನು ಅಲ್ಲಿಗೆ ನೋಡಲು ಕಳುಹಿಸಿಕೊಡಲಿ. ಇವತ್ತು ಪರಿಸ್ಥಿತಿ ಆ ರೀತಿ ಇದೆ. ಇವತ್ತಿಗೂ ಸಹ ಅಲ್ಲಿ ಟ್ಯಾಂಕುಗಳಿಗೆ ಅರಿಬೆ (ಬಟ್ಟೆ) ಕಟ್ಟಿ ಉಪಯೋಗಿಸ ಬೇಕಾಗಿದೆ. ಆದ್ದರಿಂದ ದಯಮಾಡಿ ಸಚಿವರು ಹೆಚ್ಚಿನ ಅನುದಾನವನ್ನು ಪ್ರತಿವರ್ಷವೂ ಹತ್ತತ್ತು ಕೆರೆಗಳನ್ನು ತೆಗೆದುಕೊಂಡು ಕಡಿಮೆ ಎಂದರೂ 4-5 ಕೋಟಿ ರೂಪಾಯಿಗಳನ್ನು ಕೊಟ್ಟರೆ ಅನುಕೂಲವಾಗುತ್ತದೆ ಎಂದು ತಮ್ಮ ಮುಖಾಂತರ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀಮತಿ ಶೋಭಾ ಕರಂದ್ಲಾಜೆ :- ಮಾನ್ಯ ಸಭಾಧ್ಯಕ್ಷರೆ, ಖಂಡಿತವಾಗಿ ಶಾಸಕರ ಅಪೇಕ್ಷೆಯಂತೆ ಹೆಚ್ಚಿನ ಅನುದಾನವನ್ನು ಮುಂದಿನ ಆರ್ಥಿಕ ವರ್ಷದಿಂದ ಕೊಡುವುದಾಗಿ ನಾನು ತಮ್ಮ ಮೂಲಕ ಅವರಿಗೆ ಭರವಸೆಯನ್ನು ಕೊಡುತ್ತಿದ್ದೇನೆ.

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ :- ನಾನು ಮುಖ್ಯಮಂತ್ರಿಗಳ ಮುಖಾಂತರ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ, ಇದು ಕುಡಿಯುವ ನೀರಿನ ವಿಚಾರವಾಗಿರುವುದರಿಂದ, ಸಚಿವರು ಮುಖ್ಯಮಂತ್ರಿಗಳ ಮುಖಾಂತರ ಹೆಚ್ಚು ಅನುದಾನವನ್ನು ತೆಗೆದುಕೊಂಡು ಹೆಚ್ಚು ಅನುದಾನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಐ) ವಿಷಯ: <u>ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಪರಿಹರಿಸುವ ಬಗ್ಗೆ.</u>

ಶ್ರೀ ಶ್ರೀಕಾಂತ ಎಸ್.ಕುಲಕರ್ಣಿ (ಜಮಖಂಡಿ) :- ಮಾನ್ಯ ಅಧ್ಯಕ್ಷರೇ, ಕಬ್ಬು ಬೆಳೆಗಾರರ ಸಮಸ್ಯೆಗಳ ಬಗ್ಗೆ ಸನ್ಮಾನ್ಯ ಕೃಷಿ ಮತ್ತು ಮಾರುಕಟ್ಟೆ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಶಿವರಾಜ್ ಎಸ್ ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :- ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ 2006-07ನೇ ಸಾಲಿನಲ್ಲಿ ಒಟ್ಟು 3.57 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಂದಾಜು 357 ಲಕ್ಷ ಮೆಟ್ರಿಕ್ ಟನ್ ಕಬ್ಬು ಬೆಳೆಯಲಾಗಿತ್ತು. ಆ ವರ್ಷ ಒಟ್ಟು 47 ಸಕ್ಕರೆ ಕಾರ್ಖಾನೆಗಳು ಕಾರ್ಯ ನಿರ್ವಹಿಸಿವೆ. ಆ ವರ್ಷ ಬೆಲ್ಲದ ಬೆಲೆ ಕುಸಿದಿದ್ದರಿಂದಾಗಿ ಬೆಲ್ಲ ತಯಾರಿಕೆಗೆ ಸಾಗಾಣಿಕೆಯಾಗುತ್ತಿದ್ದ 32 ಲಕ್ಷ ಟನ್ ಕಬ್ಬನ್ನು ಕಾರ್ಖಾನೆಗಳೇ ನುರಿಸಬೇಕಾದಂಥ ಪರಿಸ್ಥಿತಿ ಉದ್ಭವವಾಗಿದ್ದು, ಪ್ರಸ್ತುತ ರಾಜ್ಯದಲ್ಲಿ ಬೆಳೆಯಲಾಗಿರುವ ಎಲ್ಲ ಕಬ್ಬನ್ನು ನುರಿಸಬೇಕೆಂದು ಕಾರ್ಖಾನೆಗಳಿಗೆ ಸ್ಪಷ್ಟವಾದ ಸೂಚನೆ ನೀಡಲಾಗಿತ್ತು. 2006-07ನೇ ಸಾಲಿನಲ್ಲಿ ಕಾಕಂಬಿ ಹಾಗೂ ಸಕ್ಕರೆ ಬೆಲೆಯಲ್ಲಿ ಬಹ ತೀವ್ರವಾಗಿ ಕುಸಿತವುಂಟಾಗಿದ್ದು, ಕಾರ್ಖಾನೆಗಳು ನಷ್ಟವನ್ನು ಅನುಭವಿಸಿ, ಕಬ್ಬು ಬೆಳೆದ ರೈತರಿಗೆ ಕಬ್ಬು ಖರೀದಿ ಹಣವನ್ನು ನಿಗದಿತ ಸಮಯದಲ್ಲಿ ಪಾವತಿಸಲು ಸಾಧ್ಯವಾಗಿರುವುದಿಲ್ಲ. ಲಭ್ಯವಿದ್ದ ಪೂರ್ಣ ಪ್ರಮಾಣದ ಕಬ್ಬನ್ನು ನುರಿಸಲು ಕಬ್ಬು ಬೆಳೆಗಾರರು ಹಾಗೂ ಸಕ್ಕರೆ ಉದ್ಯಮದ ಹಿತದೃಷ್ಟಿಯಿಂದ ಈ ಕೆಳಕಂಡ ರಿಯಾಯಿತಿ, ವಿನಾಯಿತಿಗಳನ್ನು ಘೋಷಿಸಲಾಗಿತ್ತು. ದಿನಾಂಕ 16-4-2007ರಿಂದ 31-5-2007ರವರೆಗೆ ವಿವಿಧ ಕಾರ್ಖಾನೆಗಳು ನುರಿಸಿದ